

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಾರ್ವಜನಿಕ ಜೀವನ ಅಂದು ಇಂದು!...

ಒಂದು ಊರಿನ ರಸ್ತೆ ಬದಿಯಲ್ಲಿ ಸಾರ್ವಜನಿಕರ ಬಾವಿ ಇತ್ತು. ಬಾವಿ ಕಟ್ಟೆ ಸುತ್ತ ಅನೇಕ ಹೆಣ್ಣುಮಕ್ಕಳು ನಿಂತಿದ್ದರು. ಕೆಲವರು ನೀರು ಸೇದುತ್ತಿದ್ದರೆ, ಇನ್ನು ಕೆಲವರು ತಮ್ಮ ಸರದಿಗಾಗಿ ಬಿಂದಿಗೆಗಳನ್ನು ಹಿಡಿದು ಕಾಯುತ್ತಿದ್ದರು. ಆ ದಾರಿಯಲ್ಲಿ ಪ್ರಯಾಣಿಸುತ್ತಿದ್ದ ಹಿರಿಯ ವಯಸ್ಸಿನ ವ್ಯಕ್ತಿಯೊಬ್ಬರು ತಮ್ಮ ಕಾರಿನ ರೇಡಿಯೇಟರ್‌ಗೆ ನೀರನ್ನು ತುಂಬಿಸಿಕೊಳ್ಳಲು ಬಾವಿ ಹತ್ತಿರ ನಿಲ್ಲಿಸಿದರು. ಕಾರಿನಿಂದ ಕೆಳಗಿಳಿದು ಹೋಗಿ ನೀರು ಸೇದುತ್ತಿದ್ದ ಹುಡುಗಿಯೊಬ್ಬಳನ್ನು ಕೇಳಿಕೊಂಡರು. ಆಕೆಯು ತಡಮಾಡದೆ ಆಗತಾನೆ ಸೇದಿದ ಬಿಂದಿಗೆಯಿಂದ ಅವರ ಕಾರಿಗೆ ಬೇಕಾದಷ್ಟು ನೀರನ್ನು ಕೊಟ್ಟಳು. ತುಂಬಾ ಆಳವಾದ ಬಾವಿ. ಆಕೆಯ ಶ್ರಮ ಮತ್ತು ಸೌಜನ್ಯಕ್ಕೆ ಪ್ರತಿಫಲವಾಗಿ ಏನಾದರೂ ಕೊಡಬೇಕೆಂದು ಆ ಹಿರಿಯರು ಆಲೋಚಿಸಿ ತಮ್ಮ ಜೇಬಿನಿಂದ ಸ್ವಲ್ಪ ಹಣವನ್ನು ತೆಗೆದು ಆಕೆಗೆ ಕೊಡಲು ಮುಂದಾದರು. ಆಕೆ ತಟ್ಟನೆ ಹುಬ್ಬುಗಂಟಿಕ್ಕಿ "ನಾವೇನು ಪೇಟೆಸ್ಥಳದೋರೆ ಬುದ್ದಿ, ನೀರು ಮಾರಿಕೊಳ್ಳೋಕೆ?" ಎಂದು ಹಣ ತೆಗೆದುಕೊಳ್ಳಲು ನಿರಾಕರಿಸಿದಳು. ಪಕ್ಕದಲ್ಲಿದ್ದ ಹೆಣ್ಣುಮಕ್ಕಳತ್ತ ತಿರುಗಿ "ನೋಡಕ್ಕ! ಇವರು ಕಾಸು ಕಂಡೋರು, ನಾವು ಬಡವರು" ಎಂದು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದಳು. ನೀರು ಕೊಟ್ಟಿದ್ದಕ್ಕೆ ಕೃತಜ್ಞತೆಯಿಂದ ಹಣ ಕೊಡಲು ಹೋದ ಆ ಹಿರಿಯರು ಆ ಹಳ್ಳಿಹುಡುಗಿಯ ಸಭ್ಯ ನಡವಳಿಕೆಯಿಂದ ಪೆಚ್ಚಾದರು. "ಕೋಪ ಮಾಡಿಕೊಬೇಡ ಕಾಣವ್ವ, ಆಳವಾದ ಬಾವಿ, ಕಷ್ಟದಿಂದ ಸೇದಿದ ನೀರು ಕೊಟ್ಟೆ ಅಂತ, ನನ್ನ ಹತ್ತಿರ ಇನ್ನೇನೂ ಇಲ್ಲದೆ ದುಡ್ಡು ಕೊಡೋಕೆ ಬಂದೆ" ಎಂದು ಸೌಜನ್ಯದಿಂದ ನುಡಿದರು. ಅಲ್ಲಿದ್ದ ಹಿರಿಯ ವಯಸ್ಸಿನ ಇನ್ನೊಬ್ಬ ಮಹಿಳೆ 'ಇದೇನು ಮಹಾಕಷ್ಟ ಅಂತ ಹೇಳ್ತೀರಿ' ಎಂದು ಉದ್ಗರಿಸುತ್ತಾ ಹದಿನೈದು ಇಪ್ಪತ್ತು ವರ್ಷಗಳ ಹಿಂದೆ ದೂರದ ಸ್ಥಳದಿಂದ ನೀರನ್ನು ಹೊತ್ತುತರುತ್ತಿದ್ದ ತಮ್ಮ ಕಷ್ಟವನ್ನು ಹೇಳಿಕೊಂಡಳು. "ಆಗ ಮಕ್ಕಳು ಅತ್ತರೆ, ಅಳಬೇಡ ಕಂದ, ಕುಡಿಯೋಕೆ ನೀರು ಕೊಡ್ತೀನಿ, ಸುಮ್ನಿರು ಅಂದರೆ ಸುಮ್ನಾಗುತ್ತಿದ್ದವು. ಈ ಬಾವಿಯನ್ನು ಇಲ್ಲಿದ್ದ ನವರತ್ನ ರಾಮರಾಯರು ಅನ್ನೊ ಮಹರಾಯರು ತೋಡಿಸಿಕೊಟ್ಟರು, ಅವರ ಹೊಟ್ಟೆ ತಣ್ಣಗಿರಲಿ" ಎಂದಳು. "ಅವರೆಲ್ಲಿದ್ದಾರೋ ಈಗ? ನೀವು ತೆಗಿದಿರಲ್ಲ ಆ ದುಡ್ಡು, ಅವರಿಗೆ ಕೊಡಿ" ಎಂದು ನೀರು ಕೊಟ್ಟ ಹುಡುಗಿ ಮುಗುಳ್ನಗುತ್ತಾ ಹೇಳಿ ಮತ್ತೆ ನೀರು ಸೇದಲು ಹೋದಳು. ಹಳ್ಳಿಯ ಆ ಹೆಣ್ಣುಮಕ್ಕಳಿಗೆ ನೀರು ಕೇಳಿದ ಆ ಹಿರಿಯರೇ ನವರತ್ನ ರಾಮರಾಯರು ಎಂಬ ಸಂಗತಿ ಗೊತ್ತಿರಲಿಲ್ಲ. ಅವರ ಸರಸಸಲ್ಲಾಪದ ಮಾತುಗಳನ್ನು ಕೇಳಿದ ರಾಮರಾಯರು ಕರಗಿ ನೀರಾದರು.

ಇದು ಯಾವುದೋ ಕಥೆ ಕಾದಂಬರಿಯ ಪ್ರಸಂಗವಲ್ಲ. ಮೈಸೂರಿನ ಯಡತೊರೆಯ ಸಮೀಪದಲ್ಲಿರುವ 'ಗೇರದಡ' (ಗೇರಮಾಳ?) ಎಂಬ ಹಳ್ಳಿಯಲ್ಲಿ ಕಳೆದ ಶತಮಾನದ ಆರಂಭದ ವರ್ಷಗಳಲ್ಲಿ ನಡೆದ ನೈಜ ಘಟನೆ. ಆಗಿನ ಯಡತೊರೆ ತಾಲ್ಲೂಕಿನ ಅಮಲ್ದಾರರಾಗಿ ಕಾರ್ಯನಿರ್ವಹಿಸಿದ ನವರತ್ನ ರಾಮರಾಯರು ನಿವೃತ್ತರಾದ ಮೇಲೆ ಆ ಮಾರ್ಗವಾಗಿ ಪ್ರಯಾಣಿಸುವಾಗ ತಮ್ಮ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ ಅವಿಸ್ಮರಣೀಯ ದಿನ. ಇಂತಹ ಹಲವಾರು ರೋಚಕ ಘಟನಾವಳಿಗಳನ್ನುಳ್ಳ ಅವರ "ಕೆಲವು ನೆನಪುಗಳು" ಎಂಬ ಪುಸ್ತಕ ಹಳೇ ಮೈಸೂರು ಪ್ರಾಂತ್ಯದ ಸ್ವಾತಂತ್ರ್ಯಪೂರ್ವದ ದಿನಗಳ ಸ್ಥಿತಿ-ಗತಿ, ವಿಶೇಷವಾಗಿ ಅಂದಿನ ಗ್ರಾಮೀಣ ಜನಜೀವನದ ನೈಜ ಚಿತ್ರಣವುಳ್ಳ ಚಾರಿತ್ರಿಕ ದಾಖಲೆ. ಗ್ರಾಮೀಣ ಭಾಷೆಯ ಸೊಗಡನ್ನು ಹೊಂದಿದ ಒಂದು ಸುಂದರವಾದ ಗದ್ಯಕಾವ್ಯವೂ ಹೌದು. "ನನಗೆ ಕನ್ನಡದಲ್ಲಿ ಪಾಂಡಿತ್ಯವಿಲ್ಲದಿದ್ದರೂ ಅದು ನನ್ನ ಮಾತೃಭಾಷೆ, ಅದನ್ನು ಮುಕ್ಕಾಲು ಶತಮಾನ ನನ್ನ ಮನೆಯಲ್ಲಿ, ನನ್ನ ಲೋಕವ್ಯವಹಾರದಲ್ಲಿ ಶಂಕೆಯಿಲ್ಲದೆ ಉಪಯೋಗಿಸಿ ಗೌರವದಿಂದ ಗೃಹಸ್ಥನಾಗಿ ಬಾಳಿದ್ದೇನೆ. ನಾನು ಆಡುವ ಮಾತನ್ನೇ ಬರೆದರೆ ಸಾಕು" ಅದರಲ್ಲಿ ಸ್ವಾರಸ್ಯವಿರುತ್ತದೆಯೆಂಬ ಆತ್ಮವಿಶ್ವಾಸವನ್ನಿರಿಸಿಕೊಂಡು ರಾಮರಾಯರು ಬರೆದಿದ್ದಾರೆ. ಹಿರಿಯ ವಯಸ್ಸಿನಲ್ಲಿ ತಮ್ಮ ಹಿರಿದಾದ

ಲೋಕಾನುಭವವನ್ನು ಜನರ ಆಡುಮಾತಿನಲ್ಲಿಯೇ ನಿರೂಪಿಸಿದ ಈ ಗ್ರಂಥ ಮೊಟ್ಟಮೊದಲಿಗೆ 1954ರಲ್ಲಿ ಮುದ್ರಿತವಾಗಿದ್ದು ಇದುವರೆಗೆ ಐದು ಮುದ್ರಣಗಳನ್ನು ಕಂಡಿದೆ (ಪ್ರಕಾಶನ ಡಿ.ವಿ.ಕೆ ಮೂರ್ತಿ, ಮೈಸೂರು, 2006).

ಈ ಪುಸ್ತಕ ನಮ್ಮ ಕೈಸೇರಿದ್ದು ಬೆಳಗಿನ ವಾಯುವಿಹಾರದಲ್ಲಿ ನಡೆದ ವಿಚಾರವಿಹಾರದ ಪ್ರತಿಫಲ. ಕಳೆದ ವಾರದ ಅಂಕಣವನ್ನು ಬರೆದಾದ ಮೇಲೂ ಸ್ವಾತಂತ್ರ್ಯಪೂರ್ವದ ದಿನಗಳನ್ನು ಕುರಿತು ಚಿಂತಿಸುತ್ತಿದ್ದ ನಮಗೆ 'ಸಹಯಾತ್ರಿಕ'ರಾದ ಸಿರಿಗೆರೆಯ ನಿವೃತ್ತ ತತ್ವಶಾಸ್ತ್ರ ಪ್ರಾಧ್ಯಾಪಕ ಡಿ.ಎಂ.ಎಸ್ ತಂದುಕೊಟ್ಟು ಗತಕಾಲದ ಜನಜೀವನದತ್ತ ಹೆಜ್ಜೆ ಹಾಕಲು ಅನುವುಮಾಡಿಕೊಟ್ಟರು. ಪುಸ್ತಕದ ಮುಖಪುಟದ ಮೇಲೆ ಇರುವ ರಾಯರ ಭಾವಚಿತ್ರವನ್ನು ನೋಡುತ್ತಿದ್ದಂತೆಯೇ ರಾಜಾಜಿಯವರನ್ನು ನೋಡಿದಂತಾಯಿತು. ಒಳಪುಟಗಳನ್ನು ತೆರೆದಾಗ ರಾಜಾಜಿಯವರು ಇವರ ಪಕ್ಕದಲ್ಲಿಯೇ ನಿಂತಿರುವುದು ಮತ್ತಷ್ಟು ಕುತೂಹಲಕ್ಕೆ ಕಾರಣವಾಯಿತು. ಪುಸ್ತಕವನ್ನು ಓದಲು ಆರಂಭಿಸಿದ ಮೇಲೆ ಇಬ್ಬರೂ ಆತ್ಮೀಯ ಸ್ನೇಹಿತರೆಂದು ತಿಳಿಯಿತು. ಈರ್ವರ ಮುಖಭಾವ ಒಂದೇ ತೆರನಾಗಿದ್ದು ಸ್ವತಃ ರಾಜಾಜಿಯವರೇ "One soul in two bodies and two lives in each body" ಎಂದು ತಮ್ಮೀರ್ವರ ಗಾಢ ಸ್ನೇಹದ ಬಗ್ಗೆ ಬರೆದಿರುತ್ತಾರೆ. "ಜೀವನ ನಿಗೂಢ, ಅದಕ್ಕಿಂತಲೂ ನಿಗೂಢವಾದುದು ಪ್ರೀತಿ" (Life is a mystery but love is greatest mystery in it) ಎನ್ನುತ್ತಾರೆ ರಾಜಾಜಿ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದ ಅವರು "I was attracted by his brains, his brightness, his loveable exterior, and by his being better read than all the rest of us in the college" ಎಂದು ತಮ್ಮ ಸ್ನೇಹಿತನ ಗುಣಗಾನ ಮಾಡಿದ್ದಾರೆ.

ನವರತ್ನ ರಾಮರಾವ್ ಅವರು ನಿಷ್ಠುರವಾದಿಗಳೂ, ಸ್ವಾಭಿಮಾನಿಗಳೂ ಆಗಿದ್ದರು. ಬ್ರಿಟಿಷ್ ಅಧಿಕಾರಿಗಳ ಕೈಕೆಳಗೆ ಕೆಲಸಮಾಡಿದರೂ ಅವರಿಗೆ ಜೀ ಹುಜೂರ್ ಎಂದು ಸಲಾಂ ಹೊಡೆದವರಲ್ಲ. ಯಡತೊರೆ ತಾಲ್ಲೂಕಿನ ಅಮಲ್ದಾರರಾಗಿ ಛಾರ್ಜು ವಹಿಸಿಕೊಂಡಾಗ ಮಾರನೆಯ ದಿನ ಸಂಜೆ ಆಗಿನ ಡೆಪ್ಯುಟಿ ಕಮಿಷನರ್ ಆದ ಸ್ಪಾರ್ಕ್ಸ್ (Sparkes) ಸಾಹೇಬರು ಬರುತ್ತಾರೆಂದು ತಿಳಿಯಿತು. ಜಿಲ್ಲಾಧಿಕಾರಿಯ ಕಛೇರಿಯಿಂದ ಇಬ್ಬರು 'ರೈಟರು'ಗಳು ಖುದ್ದಾಗಿ ಯಡತೊರೆಗೆ ಬಂದು 'ಸಾಹೇಬರ ಪ್ರತಾಪ, ಪ್ರಭಾವಗಳನ್ನು ವರ್ಣಿಸಿ, ನೋಡಿ ಸಾರ್, ಸ್ವಲ್ಪ careful ಆಗಿ ಇರಿ, ಈ ಸಾಹೇಬರು ಬಹಳ ದುಡುಕು, ಯಾರನ್ನೂ care ಮಾಡತಕ್ಕವರಲ್ಲ, damn, bloody ಇಲ್ಲದ ಮಾತೇ ಇಲ್ಲ' ಎಂದು ಎಚ್ಚರಿಸಿದ್ದರಂತೆ. ರಾಯರು ಆ ದಿನ ಮಾಮೂಲಿಯಂತೆ ಮುನಿಸಿಪಲ್ ಕೆಲಸಗಳನ್ನು ಪರಿಶೀಲಿಸಲು ಕುದುರೆ ಸವಾರರಾಗಿ ಊರಗಸ್ತು ಪೂರೈಸಿ, ಕಛೇರಿಯಲ್ಲಿ 'ಜಮಾಬಂದಿ' ಲೆಕ್ಕಗಳ ಏರ್ಪಾಡನ್ನು ನೋಡಲು ಬರುತ್ತಿದ್ದರು. ಅಷ್ಟರಲ್ಲಿ ದಾರಿಯಲ್ಲಿ ಬೈಸಿಕಲ್ ಶಬ್ದ ಕೇಳಿಸಿತು. ಅದರ ಮೇಲೆ ಒಬ್ಬ ಯೂರೋಪಿಯನ್ ಬರುತ್ತಿರುವುದು ಕಾಣಿಸಿತು. ಆತನೇ ಜಿಲ್ಲಾಧಿಕಾರಿ ಇರಬಹುದೆಂದು ರಾಯರು ಊಹಿಸಿದರು. ಆಗಿನ ಕಾಲದ ಡೆಪ್ಯುಟಿ ಕಮಿಷನರುಗಳಿಗೆ ಓಡಾಡಲು ಈಗಿನಂತೆ ಕಾರುಗಳು ಇರಲಿಲ್ಲ. ಕುದುರೆ ಇಲ್ಲವೇ ಸೈಕಲ್‌ನಲ್ಲಿ ಬರುತ್ತಿದ್ದರು. ಆಗ ಬೈಸಿಕಲ್ಲುಗಳೆಂದರೆ ಈಗಿನ ವಿಮಾನಗಳಿಗಿಂತಲೂ ಅಪೂರ್ವ ದರ್ಶನದ ವಸ್ತು ಎಂದು ರಾಯರು ಬಣ್ಣಿಸುತ್ತಾರೆ. ಬ್ರಿಟಿಷ್ ಅಧಿಕಾರಿ ಸೈಕಲ್‌ನಿಂದ ಇಳಿಯುತ್ತಿದ್ದಂತೆಯೇ ರಾಯರು

> "Good morning. I am the Amildar. May I know if I am speaking to the Deputy Commissioner?"

ಎಂದು ಕೇಳಿದರು. ಕೆಂಪು ಮೂತಿಯ ಆ ಅಧಿಕಾರಿ ತನ್ನನ್ನು ಸ್ವಾಗತಿಸಲು ತಾಲ್ಲೂಕು ಸರಹದ್ದಿನಲ್ಲಿ ರಾಯರು ನಿಲ್ಲದ ಕಾರಣ ಸಿಟ್ಟಾಗಿ,

> "Damn you! What the hell do you think you are doing here? What sort of a bloody Amildar are you not to meet me at your taluk frontier?"

ಎಂದು ಗದರಿಸಿದನಂತೆ. ಅದಕ್ಕೆ ರಾಯರು ತಮ್ಮ ಕಛೇರಿಯ ಸಿಬ್ಬಂದಿ ತಾವು ಸಂಜೆ ಬರುತ್ತೀರೆಂದು ತಿಳಿಸಿದ್ದರು, ಇಷ್ಟು ಬೇಗ ತಾವು ಬರುತ್ತೀರೆಂದು ನಾನು ನಿರೀಕ್ಷಿಸಿರಲಿಲ್ಲವೆಂದು ಸ್ಪಷ್ಟನೆ ನೀಡಿದರು. ರಾಯರ ಸಮಜಾಯಿಷಿಯಿಂದ ತೃಪ್ತಿಗೊಳ್ಳದ ಬ್ರಿಟಿಷ್ ಅಧಿಕಾರಿ "That is a damn lie" ಎಂದು ಗದರಿಸಿ ಬಂಗಲೆಯೊಳಗೆ ಹೋದ. ಆನಂತರ ಹೊರಗೆ ಬಂದು "How long have you been Amildar here? You are too young to be an Amildar!" ಎಂದು ಕೇಳಿದ. ಬ್ರಿಟಿಷ್ ಅಧಿಕಾರಿ ಆಡಿದ ಒರಟಾದ ಮಾತುಗಳಿಂದ ಸ್ವಾಭಿಮಾನ ಕೆರಳಿದ ರಾಯರು ಉತ್ತರ ಕೊಡಲು ನಿರಾಕರಿಸಿ ಅವನನ್ನು ದಿಟ್ಟಿಸಿ ನೋಡಿ,

> "If you want me to answer your questions, you must express regret for what you said a little while ago. I am a gentleman and claim to be treated like one. I refuse to take any notice of you unless you aplologise"

ಎಂದು ದಿಟ್ಟತನದಿಂದ ತನ್ನ ಮೇಲಧಿಕಾರಿಯೇ ಕ್ಷಮಾಯಾಚನೆ ಮಾಡಬೇಕೆಂದು ಪಟ್ಟು ಹಿಡಿದರು. ಬ್ರಿಟಿಷ್ ಅಧಿಕಾರಿಯ ಮುಖ ಮತ್ತಷ್ಟೂ ಕೆಂಪೇರಿತು. ರಾಯರ ಹತ್ತಿರ ಬಂದು ಸಡಿಲಿಸದ ಅವರ ಪಟ್ಟನ್ನು ನೋಡಿ ತಣ್ಣಗಾಗಿ

> "What is biting you now! Oh that? Couldn't you see I was damn tired, my dear fellow? You want an apology from your Deputy Commissioner for a hasty word? That's what comes of College and University learning, I suppose! Well, I never! But since you want it, yes, I am sorry; I didn't mean it, not a word!"

ಎಂದು ರಾಯರ ಭುಜದ ಮೇಲೆ ಕೈಹಾಕಿ ಹಸ್ತಲಾಘವ ಮಾಡಿ "Come on, don't be silly" ಎಂದು ಒಳ್ಳೆಯ ಮಾತುಗಳನ್ನಾಡಿ ಬಂಗಲೆಯ ಒಳಗೆ ಕರೆದುಕೊಂಡು ಹೋದನಂತೆ. ಮೇಲಧಿಕಾರಿ ತನ್ನ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬಹುದೆಂದು ಮಾನಸಿಕವಾಗಿ ಸಿದ್ಧರಾಗಿದ್ದ ರಾಯರಿಗೆ ಈ ಅನಿರೀಕ್ಷಿತ ವರ್ತನೆಯಿಂದ 'ಕಣ್ಣಿನಲ್ಲಿ ಪಳಪಳನೆ ನೀರು ಬಂತು'. ಆನಂತರ ಇಬ್ಬರ ಮಧ್ಯೆ ನಡೆದ ಸಂಭಾಷಣೆ ವ್ಯಕ್ತಿಗತವಾಗಿರದೆ ಸೌಹಾರ್ದಯುತವಾಗಿ ತಮ್ಮ ಕರ್ತವ್ಯನಿರ್ವಹಣೆಯತ್ತ ತಿರುಗಿತು. ಈ ಪ್ರಕರಣದಲ್ಲಿ ರಾಯರ ಆತ್ಮಗೌರವ ಮತ್ತು ಸ್ವಾಭಿಮಾನ, ಬ್ರಿಟಿಷ್ ಅಧಿಕಾರಿಯ 'ತಪ್ಪೊಪ್ಪಿಗೆ'ಯ ಔದಾರ್ಯ, ಸತ್ಯಸಂಧತೆಗೆ ಕೊಡುವ ಮನ್ನಣೆ ಎರಡೂ ಎದ್ದುಕಾಣುತ್ತವೆ. ಇಂದಿನ ಪ್ರಜಾತಂತ್ರದ ಅಧಿಕಾರಶಾಯಿಯ ದರ್ಪ-ದೌರ್ಜನ್ಯಗಳಲ್ಲಿ ರಾಯರು 'ಸಸ್ಪೆಂಡ್' ಆಗುತ್ತಿದ್ದರೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ!

ರಾಯರ ಪ್ರಕಾರ ಆಗಿನ ದಿನಮಾನಗಳಲ್ಲಿ ಸರಕಾರ ಜನರಿಂದ ಬಹಳ ದೂರವಾಗಿತ್ತು. ದಿವಾನರೂ, ರೆವಿನ್ಯೂ ಕಮಿಷನರೂ, ಡೆಪ್ಯುಟಿ ಕಮಿಷನರೂ ಜನರಿಗೆ ಭೇಟಿಯಾಗಲು ಅಷ್ಟು ಸುಲಭವಾಗಿ ಸಿಕ್ಕುತ್ತಿರಲಿಲ್ಲ. ಅಮಲ್ದಾರರು ಆಯಾಯ ತಾಲ್ಲೂಕಿನ ಜನರ ಕುಂದುಕೊರತೆಗಳನ್ನು ವಿಚಾರಿಸಿ ಸರಕಾರಕ್ಕೆ ವರದಿಮಾಡಿ ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಿದ್ದರು. ಜನರ ಯೋಗಕ್ಷೇಮಕ್ಕೆ ಬದ್ಧಕಂಕಣರಾಗಿರುತ್ತಿದ್ದರು. ಹೀಗಾಗಿ ಆಗಿನ ಅಮಲ್ದಾರರು ತಾಲ್ಲೂಕಿನ ಧಣಿಗಳಾಗಿದ್ದರೂ ಜನರ ದೃಷ್ಟಿಯಲ್ಲಿ ಅವರು ತಾಲ್ಲೂಕಿನ ಎಲ್ಲ ಜನರ 'ತಾಯಿ'ಯಂತಿದ್ದರು. ತಮ್ಮ ಮನೆಗಳಲ್ಲಿ ನಡೆಯುವ ಮದುವೆ ಮಂಗಳಕಾರ್ಯಗಳಿಗೆ ಜನರು ಅವರನ್ನು ಆಹ್ವಾನಿಸುತ್ತಿದ್ದರು. ಜನರ ನಿಕಟಪರಿಚಯ ಅವರಿಗೆ ಇರುತ್ತಿತ್ತು. ರಾಯರೇ ಅಮಲ್ದಾರರಾಗಿದ್ದ ಆಗಿನ ಯಡತೊರೆ "ತಾಲ್ಲೂಕಿನಲ್ಲಿ ನನಗೆ ಪರಿಚಯವಿಲ್ಲದ ಗೃಹಸ್ಥರಿಲ್ಲ" ಎಂದು ಒಂದೆಡೆ ಹೇಳಿಕೊಂಡಿದ್ದಾರೆ. ಇನ್ನೊಂದು ಅಪರೂಪದ ಘಟನೆ ಹೀಗಿದೆ:

ಒಮ್ಮೆ ಯಡತೊರೆಯಿಂದ ನಾಲ್ಕೈದು ಮೈಲಿ ದೂರದಲ್ಲಿರುವ 'ತಿಪ್ಪೂರು' ಎಂಬ ಗ್ರಾಮದಲ್ಲಿರುವ ದೊಡ್ಡ ಜಮೀನುದಾರರ ಮಕ್ಕಳ ಮದುವೆಗೆ ರಾಯರು ಆಮಂತ್ರಿತರಾಗಿ ಹೋಗಿದ್ದರು. ಜಮೀನುದಾರರು ರಾಯರನ್ನು ಅದ್ದೂರಿಯಿಂದ ಮೆರವಣಿಯಲ್ಲಿ ಸ್ವಾಗತಿಸಿ ಮದುವೆಮಂಟಪಕ್ಕೆ ಬರಮಾಡಿಕೊಂಡರು. ನವದಂಪತಿಗಳನ್ನು ಹರಸಿ ಆಶೀರ್ವದಿಸಿದ ನಿರ್ಗಮಿಸುವಾಗ ರಾಯರಿಗೆ ಜಮೀನುದಾರರು ತಾಂಬೂಲದ ಜೊತೆಗೆ ಒಂದ ವಲ್ಲಿಯನ್ನು ಉಡುಗೊರೆಯಾಗಿ ಕೊಟ್ಟರು. ರಾಯರು ಇದು 'ಸರಕಾರದ ರೂಲ್ಸು'ಗಳಿಗೆ ವಿರುದ್ಧ, ಬೇಡವೆಂದು ಎಷ್ಟೇ ಹೇಳಿದರೂ ಜಮೀನುದಾರರು ಒಪ್ಪಲಿಲ್ಲ. ನಿರಾಕರಿಸಿದರೆ ಜಮೀನುದಾರರಿಗೆ ಸಭೆಯಲ್ಲಿ ಅವಮಾನದ ಭೀತಿ, ಸ್ವೀಕರಿಸಿದರೆ ಸರಕಾರದ ನಿಯಮದ ಉಲ್ಲಂಘನೆಯ ಭೀತಿ. ರಾಯರು ದ್ವಂದ್ವಕ್ಕೆ ಒಳಗಾಗಿ ವಲ್ಲಿಯನ್ನು ಸ್ವೀಕರಿಸಿದರಾದರೂ ಉಡುಗೊರೆಯನ್ನು ಸ್ವೀಕರಿಸಿದ ಅನಿವಾರ್ಯ ಪರಿಸ್ಥಿತಿಯನ್ನು ವಿವರಿಸಿ ಸುದೀರ್ಘ ವರದಿಯೊಂದಿಗೆ ಡೆಪ್ಯೂಟಿ ಕಮಿಷನರ್ Sparkes ಅವರಿಗೆ ವಲ್ಲಿಯನ್ನು ಕಳುಹಿಸಿಕೊಟ್ಟರು. ಬಹಳ ದಿನಗಳವರೆಗೆ ಸಾಹೇಬರಿಂದ ಉತ್ತರ ಬರಲಿಲ್ಲ. ಆಮೇಲೆ ಅವರು ಸ್ವತಃ ಮೈಸೂರಿಗೆ ಹೋಗಿ ಸಾಹೇಬರನ್ನು ಖುದ್ದಾಗಿ ಕಂಡು ವಿವರಿಸಿದಾಗ Sparkes ಮಹಾಶಯ ಹೀಗೆ ಉದ್ಗರಿಸಿದ:

> "Thanks very much for that cloth, Amildar; but what the hell do you want me to do with it? How silly! Never had a case like this before. Take the damn thing away and do what you like with it yourself!"

ಸಹೃದಯ ಓದುಗರೇ! ಮೇಲಿನ ಸಾಲುಗಳನ್ನು ಓದುವಾಗ ನಮಗೆ ನೆನಪಾಗಿದ್ದು ನಮ್ಮ ಹಿಂದಿನ ರಾಷ್ಟ್ರಪತಿ ಅಬ್ದುಲ್ ಕಲಾಂ ರವರು. ರಾಷ್ಟ್ರಪತಿಭವನಕ್ಕೆ ಅವರು ಬರುವಾಗ ಹೇಗೆ ಬಂದಿದ್ದರೋ ಹಾಗೆಯೇ ಹಿಂದಿರುಗಿದರು.

ಅಧಿಕಾರಾವಧಿಯಲ್ಲಿ ತಮಗೆ ಬಂದ ಒಂದು ಉಡುಗೊರೆಯನ್ನೂ ಅವರು ಜೊತೆಯಲ್ಲಿ ಒಯ್ಯಲಿಲ್ಲ. ಆದರೆ ಅವರ ಹಿಂದಿನವರೊಬ್ಬರು ರಾಷ್ಟ್ರಪತಿಭವನವನ್ನು ಬಿಡಲು 40 ಲಕ್ಷ ರೂ. ಕೊಡಬೇಕೆಂದು ಹಠಮಾಡಿದ್ದರಂತೆ. ಅವರಿಗಿಂತ ಹಿಂದಿದ್ದ ಇನ್ನೊಬ್ಬ ರಾಷ್ಟ್ರಪತಿಯವರು ಪತ್ನೀಸಮೇತರಾಗಿ ಬೆಂಗಳೂರಿಗೆ ಬಂದರೆ ಪೋಲೀಸರು ಬಂದೋಬಸ್ತು ಮಾಡುವ ಮೊದಲೇ ಸೀರೆ ಅಂಗಡಿ ಬಾಗಿಲುಗಳು ಮುಚ್ಚುತ್ತಿದ್ದ ಸಂಗತಿ ಯಾರಿಗೆ ತಾನೆ ಗೊತ್ತಿಲ್ಲ!

1.9.2010

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑